ಹತ್ತು ಹದಿನೈದು ವರ್ಷದ ಹಿಂದಿನ ಒಂದು ಪ್ರಸಂಗ. ಕಾರ್ಯನಿಮಿತ್ತ ಬೆಂಗಳೂರಿಗೆ ಬಂದವನು, ಅಂದು ಊರಿಗೆ ವಾಪಸ್ಸಾಗಲು ಸಂಜೆ ಖಾಸಗಿ ಬಸ್‌ಗೆ ಟಿಕೆಟ್ ಬುಕ್ ಮಾಡಿದ್ದೆ. ಬಸ್ ಹೊರಡುವ ಸಮಯದಲ್ಲಿ ಮೂತ್ರಶನಿಯ ಬಗ್ಗೆ ಸಾಕಷ್ಟು ಎಚ್ಚರಿಕೆಯನ್ನೂ ತೆಗೆದುಕೊಂಡಿದ್ದೆ. ಅಗತ್ಯ ಇರದಿದ್ದರೂ ಎರಡೆರಡು ಸಲ 'ಕಾಲ್' ಅಟೆಂಡ್ ಮಾಡಿದ್ದೆ. ಇನ್ನೈದು ನಿಮಿಷಗಳಿರಬೇಕು ಬಸ್ ಹೊರಡಲು, ಆವಾಗ ಇಣುಕಿತು ಮೂತ್ರಶಂಕೆ. ಹುಸಿಭಯ ಇದ್ದರೂ ಇದ್ದೀತು ಅಂತ ಸಮಾಧಾನ ಹೇಳುತ್ತ, 'ಇದಕಾರು ಅಂಜುವರು, ಇದಕಾರು ಅಳುಕುವರು' ಎಂಬ ಹುಂಬಧೈರ್ಯದೊಂದಿಗೆ, ಮೂತ್ರಿಸುವ ವಿಚಾರ ಚಿಗುರುವ ಮುನ್ನವೆ ಚಿವುಟಿಹಾಕುವ ಯತ್ನಮಾಡಿದೆ. ಆದರೆ, ಅದುಮಿದಷ್ಟೂ ಹಟಕ್ಕೆ ಬೀಳುವ ಮೊಂಡ ಹುಡುಗನಂತೆ, ಕಿರಾತಕನಾಗಿ ಭಯ ಹೆಚ್ಚಿಸತೊಡಗಿತು. ಪ್ರಯಾಣ ಸುರುವಾಯಿತೆಂದರೆ, ಮತ್ತೆ ಮೂತ್ರವಿಮೋಚನೆಗೆ ಅವಕಾಶ ಯಾವಾಗೊ ಏನೊ? ಹೋಗೊದಾದ್ರೆ ಪೀಡೆ ಈಗ್ಲೆ ಕಳೆದುಹೋಗ್ಲಿ, ಎಂಬ ಕ್ಷೇಮಭಾವ ಜಾಗೃತವಾಗಿ, ಮೇಲುಗೈ ಸಾಧಿಸಿತು.

ಅದೇನೊ ಸರಿ. ಆದರೆ, ಬೆಂಗಳೂರಂಥ ಕಾಂಕ್ರಿಟ್ ಕಾಡಿನಲ್ಲಿ ಹಾಗೆಲ್ಲ ಸುಲಭವಾಗಿ ಮೂತ್ರಿಸುವುದು ಸಾಧ್ಯವೆ? ಅದೂ ಮೆಜೆಸ್ಟಿಕ್ ಅಂಬೊ ಜನಜಾತ್ರೆಯ ಗದ್ದಲದಲ್ಲಿ! ಸುತ್ತಲೂ ಕಣ್ಣಾಡಿಸಿದೆ. ಹೂಂ... ಹೂಂ, ನನ್ನ ಅಗತ್ಯ ಪೂರೈಸುವ ತಾಣಗಳು ಅಲ್ಲಿ ಕಾಣಲಿಲ್ಲ.

